# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 639 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಪಿ ನಂಜುಂಡಿ ವಿಶ್ವಕರ್ಮ(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23.12.2022 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 1977 ರ ಹಾವನೂರು ಆಯೋಗವು ಯಾವ ಯಾವ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಿರುತ್ತದೆ. (ವಿವರಗಳನ್ನು ಒದಗಿಸುವುದು) | ಶ್ರೀ ಎಲ್.ಜಿ. ಹಾವನೂರು ನೇತೃತ್ವದ ಆಯೋಗವು ಯಾವುದೇ ಜಾತಿ/ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡಿರುವುದಿಲ್ಲ. |
| ಆ) | ತದನಂತರದಲ್ಲಿ ಯಾವ ಯಾವ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ಕಾರ್ಯ ಕೈಗೊಳ್ಳಲಾಗಿದೆ. | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಯಾವುದೇ ಜಾತಿ/ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡಿರುವುದಿಲ್ಲ. |
| ಇ) | ಹಾವನೂರು ಆಯೋಗವು ವಿಶ್ವಕರ್ಮ ಸಮಾಜದ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಿದೆಯೇ; ನಡೆಸಿದ್ದಲ್ಲಿ ಜಾತಿಯಲ್ಲದ ಜಾತಿಗಳವರು ಕೇವಲ ವೃತ್ತಿಯಲ್ಲಿ ತೊಡಗಿಸಿಕೊಂಡವರನ್ನು ಉಪಜಾತಿಗಳನ್ನಾಗಿ ಆಯ್ಕೆ ಮಾಡಿಕೊಂಡಿದ್ದು ಸರಿಯೇ; ಸರಿಯಿಲ್ಲದಿದ್ದಲ್ಲಿ ಅವುಗಳನ್ನು ಪ್ರತ್ಯೇಕ ಜಾತಿಗಳಾಗಿ ವಿಂಗಡಿಸದಿರಲು ಕಾರಣಗಳೇನು; | ಕ್ರ.ಸಂ(ಅ)ರಲ್ಲಿ ನೀಡಿರುವ ಹಿನ್ನೆಲೆಯಲ್ಲಿ ಅನ್ವಯಿಸುವುದಿಲ್ಲ . |
| ಈ) | ದೈವಜ್ಞ ಬ್ರಾಹ್ಮಣರು ಹಾಗೂ ಗೆಜೆಗಾರ ಸಮಾಜದವರು ವಿಶ್ವಕರ್ಮ ಜಾತಿಗೆ ಸಂಬಂಧಪಡದೆ; ಅವರ ಸಂಪ್ರದಾಯ, ಆಚಾರ ಮತ್ತು ವಿಚಾರಗಳಿಗೆ ನಮ್ಮ ಆಚಾರ ವಿಚಾರಗಳಿಗೆ ಅಜಗಜಾಂತರ ವ್ಯತ್ಯಾಸವಿರುವುದು ತಿಳಿದಿದ್ದರೂ, ಸರ್ಕಾರ ಸುಮ್ಮನಿರಲು ಕಾರಣಗಳೇನು; | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002 ರ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯ ಪ್ರವರ್ಗ-2ರ ಕ್ರಮಸಂಖ್ಯೆ: 11 (ಎ) ರಲ್ಲಿ ವಿಶ್ವಕರ್ಮ, 11 (ಎನ್) ರಲ್ಲಿ ದೈವಜ್ಞ ಬ್ರಾಹ್ಮಣ ಹಾಗೂ 11 (ಬ) ರಲ್ಲಿ ಗೆಜ್ಜೆಗಾರ ಜಾತಿಗಳನ್ನು ಸೇರಿಸಲಾಗಿರುತ್ತದೆ.<br>ದೈವಜ್ಞ ಬ್ರಾಹ್ಮಣ, ವಿಶ್ವಕರ್ಮ ಹಾಗೂ ಗೆಜ್ಜೆಗಾರ ಸಮುದಾಯಗಳಿಗಿರುವ ವ್ಯತ್ಯಾಸದ ಕುರಿತ ಯಾವುದೇ |

| | | |
|---|---|---|
| | | ಪ್ರಸ್ತಾವನೆ/ಮಾಹಿತಿ ಸರ್ಕಾರಕ್ಕೆ ಸಲ್ಲಿಕೆಯಾಗಿರುವುದಿಲ್ಲ. |
| ಉ) | ದೈವಜ್ಞ ಬ್ರಾಹ್ಮಣರು ಹಾಗೂ ಗೆಜೆಗಾರ ಸಮಾಜವನ್ನು ಬೇರ್ಪಡಿಸಿ ಇವರನ್ನು ಹಿಂದುಳಿದ ವರ್ಗದ 103 ಜಾತಿಗಳಲ್ಲಿಯೇ ಪ್ರತ್ಯೇಕವಾಗಿ ಗುರುತಿಸಲು ಆಯೋಗಕ್ಕೆ ಅಧಿಕಾರವಿಲ್ಲವೇ; ಇದ್ದಲ್ಲಿ ಮಾಡದಿರಲು ಕಾರಣಗಳೇನು? | ವಿಶ್ವಕರ್ಮ ಸಮುದಾಯದಿಂದ ಬೇರ್ಪಡಿಸಲು ದೈವಜ್ಞ ಬ್ರಾಹ್ಮಣ ಹಾಗೂ ಗೆಜ್ಜೆಗಾರ ಸಮುದಾಯಗಳಿಂದ ಆಯೋಗವು ಮನವಿಗಳನ್ನು ಸ್ವೀಕರಿಸಿರುವುದಿಲ್ಲ. |

ಸಂಖ್ಯೆ: ಹಿಂವಕ 252 ಬಿಸಿಎ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು